ಶಿರಾಳಕೊಪ್ಪದಲ್ಲಿ ಸಬ್‌ಟ್ರೆಜರಿ ಪ್ರಾರಂಭಿಸುವ ಬಗ್ಗೆ

೧೭೪ ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ ಮುಖ್ಯ ಮಂತ್ರಿಗಳು ಉತ್ತರಿಸುವರೆ ?

ಅ) ಶಿಕಾರಿಪುರ ತಾಲ್ಲೂಕ್, ಶಿರಾಳಕೊಪ್ಪದಲ್ಲಿ ಉಪ ಖಜಾನೆ ಪ್ರಾರಂಭಿಸಬೇಕೆಂದು ಅಲ್ಲಿಯ ಜನಗಳು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಉಪ ಖಜಾನೆಯನ್ನು ಶಿರಾಳಕೊಪ್ಪದಲ್ಲಿ ಪ್ರಾರಂಭಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಅಲ್ಲಿನ ಜನ ಸಬ್ ಟ್ರಜರಿ ಮಾಡಬೇಕೆಂದು ಸಾಕಷ್ಟು ವಿನಂತಿ ಮಾಡಿಕೊಂಡಿದ್ದರೂ, ಮಾನ್ಯ ಮುಖ್ಯಮಂತ್ರಿಗಳು ಗಮನಕ್ಕೆ ಬಂದಿಲ್ಲವೆಂದು ಹೇಳಿದ್ದಾರೆ. ಶಿರಾಳ ಕೊಪ್ಪದಲ್ಲಿ ಸುಮಾರು ೧೪–೧೫ ಸಾವಿರ ಜನಸಂಖ್ಯೆ ಇದೆ. ದಯವಿಟ್ಟು ಸಬ್ ಟ್ರಜರಿ ಮಾಡುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ೧೯೮೦ನೇ ಇಸವಿಯಲ್ಲಿ ಕೆಲವು ಜನ ಆಗಿನ ತೋಟಗಾರಿಕೆ ಇಲಾಖೆಯ ಮಂತ್ರಿಗಳ ಹತ್ತಿರ ಸಬ್ ಟ್ರಜರಿ ಮಾಡಬೇಕೆಂದು ಹೇಳಿದ್ದಾರೆ. ಆಗಲೇ ಆ ಬೇಡಿಕೆಯನ್ನು ತಿರಸ್ಕಾರ ಮಾಡಲಾಗಿದೆ. ಪ್ರತಿ ತಿಂಗಳು ಬರತಕ್ಕ ಚಲನ್ ೬೦೦ಕ್ಕಿಂತ ಹೆಚ್ಚಿಲ್ಲ, ಪೋಚರ್ಸ್ ೩೦೦ ಡ್ರಾಯಿಂಗ್ ಆಫೀಸರ್ಸ್ ೧೫ ಜನ, ಸರ್ಕಾರಿ ನೌಕರರು ೨೦ ಜನ ಇದ್ದಾರೆ, ವಿಶ್ರಾಂತಿ ವೇತನದಾರರು ೧೫೦ ಜನ ಇದ್ದಾರೆ. ವೃದ್ಧಾಪ್ಯ ವೇತನ ಮತ್ತು ಅಂಗವಿಕಲ ವೇತನದಾರರು ಸುಮಾರು ೫೦೦ ಜನ ಇದ್ದಾರೆ. ಹಾಲಿ ಇರತಕ್ಕ ಸಬ್ ಟ್ರಜರಿ ಸುಮಾರು ೨೦ ಕಿಲೋಮೀಟರ್ ಅಂದರೆ ೧೨ ಮೈಲಿ ದೂರದಲ್ಲಿದೆ. ವಿಶ್ರಾಂತಿ ವೇತನದಾರರು ಬ್ಯಾಂಕ್‌ಗಳಲ್ಲಿ ಚೆಕ್ ಮುಖಾಂತರ ಮತ್ತೆ ಎಂ.ಒ. ಮೂಲಕ ಹಣ ಪಡೆಯುತ್ತಿದ್ದಾರೆ. ಅವರಿಗೆ ಸಬ್ ಟ್ರಜರಿಯಿಂದ ಪ್ರಯೋಜನವಾಗುವುದಿಲ್ಲ. ಹೀಗಿರುವುದರಿಂದ ಅಲ್ಲಿ ಸಬ್ ಟ್ರಜರಿ ಮಾಡುವಂಥ ಅವಶ್ಯಕತೆ ಇದೆಯೇ ಇಲ್ಲವೇ ಎನ್ನುವ ಬಗ್ಗೆ ಯೋಚನೆ ಮಾಡಬೇಕಾಗಿದೆ.

ಬಂಟವಾಳ ತಾಲ್ಲೂಕಿನ ಅತ್ಯುನ್ನತ ಹಾಗೂ ಪೊಣಿಗಳಲ್ಲಿರುವ ಸಾರ್ವತ್ರಿಕ ಆರೋಗ್ಯ ಕೇಂದ್ರಗಳ ದುರಸ್ತಿ

೧೭೫. ಶ್ರೀ ಕೆ. ರಾಮಭಟ್ (ಪುತ್ತೂರು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ಮೊದಲು ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಆಡಳಿತಕ್ಕೆ ಒಳಪಟ್ಟಿದ್ದು ಈಗ ಸರಕಾರ ದವರಿಗೆ ನಡೆಸುತ್ತಿರುವ ಬಂಟವಾಳ ತಾಲ್ಲೂಕಿನ ಅದ್ಯನಡ್ಕ ಮತ್ತು ಪೊಣಿ ಹಾಗೂ ಪುತ್ತೂರು ತಾಲ್ಲೂಕಿನ ಉಪ್ಪಿನಂಗಡಿ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳು ನಾದುರಸ್ತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ಕಟ್ಟಡಗಳನ್ನು ಯಾವ ವರುಷದಲ್ಲಿ ದುರಸ್ತಿ ಮಾಡಿಸಿದ್ದರು.

ಇ) ಈ ಕಟ್ಟಡಗಳನ್ನು ಯಾವಾಗ ಸರ್ಕಾರದವರು ದುರಸ್ತಿ ಮಾಡಲಾಗುವುದು ಎಂಬುದನ್ನು ತಿಳಿಸುವರೆ ?

ಶ್ರೀ ಹಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಬಂದಿದೆ.